ಶ್ರೀ ಜೆ. ಎಚ್. ಪಟೇಲ್.—ಕನ್ನಡದಲ್ಲಿ ಅರ್ಥವಾಗುವ ಭಾಷೆಯಲ್ಲಿ ಹೇಳ್ತೀನಿ. ದಯವಿಟ್ಟು ಕೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ಸರಿ, ನಿಮಗೆ ಇಂಗ್ಲೀಷ್ ಬರುವುದಿಲ್ಲ, ಕನ್ನಡವೂ ಬರುವುದಿಲ್ಲ. ನಿಮಗೆ ಒಂದೇ ಬರುವುದು. ಅದೇನೆಂದರೆ ಮಿಸ್‌ಲೀಡ್ ಮಾಡುವುದು. ಸುಮ್ಮನೆ ನೀವು ಅಂಥಾದ್ದು ಹೇಳಬೇಡಿ. ಅವುಮಿಟ್ಟು ಕನ್ನಡ ನಿಮಗೇ ಬರುವ ಹಾಗೆ ಮಾತನಾಡುತ್ತೀರಿ.

ಶ್ರೀ ಜೆ. ಹೆಚ್. ಪಟೇಲ್.—ನೀವು ಹೇಳುವುದಕ್ಕೆ ತಯಾರಿಲ್ಲದಿದ್ದರೆ ನಾನೇನೂ ಹೇಳುವುದಕ್ಕೆ ಹೋಗುವುದಿಲ್ಲ. ಇರುವ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು, ಇತ್ತು ನಾವು ಕಷ್ಟದಲ್ಲಿದ್ದೇವೆ. ಅದಷ್ಟು ನಾವು ಶ್ರಮಪಟ್ಟು ಕೊಡುವ ವಿದ್ಯುತ್ತನ್ನು ಸರಿಯಾಗಿ ಕೊಡಬೇಕು ಅಂತ ಪ್ರಯತ್ನ ಮಾಡುತ್ತಿದ್ದೇವೆ.

ಅಧ್ಯಕ್ಷರು.—ಸಾಕುಬಿಡಿ. ಮುಂದಿನ ಗಮನ ಸೆಳೆಯುವ ಸೂಚನೆಗೆ ಹೋಗೋಣ

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ. ನಾವು ಕೇಳಿದ್ದು ವಿದ್ಯುತ್ತನ್ನು ಸತತವಾಗಿ ಕೊಡಬೇಕು ಅಂತ.....

ಅಧ್ಯಕ್ಷರು.—ಭಾಷಣ ಬೇಡ. ಏನಾದರೂ ಕ್ಲಾರಿಫಿಕೇಶನ್ ಇದ್ದರೆ ಹೇಳಿ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ಮುಖ್ಯ ಬೇಡಿಕೆಗೆ ಉತ್ತರ ಬಂದಿಲ್ಲ.

(ಶ್ರೀ ಆರ್. ವೆಂಕಟರಾಮಯ್ಯನವರು ಸಭಾಧ್ಯಕ್ಷರ ಪೀಠದ ಮುಂದಿನ ಆವರಣಕ್ಕೆ ಬಂದು ಮಾತನಾಡಲು ಪ್ರಾರಂಭಿಸಿದರು)

ಶ್ರೀ ಆರ್. ವೆಂಕಟರಾಮಯ್ಯ.—ಆರು ಗಂಟೆಗಳ ಕಾಲ ಹಗಲು ಹೊತ್ತಿನಲ್ಲಿ ನಮಗೆ ಎಲೆಕ್ಟ್ರಿಸಿಟಿ ಕೊಡಬೇಕೆಂದು ನಾವು ಕೇಳಿದ್ದು.

ಅಧ್ಯಕ್ಷರು,—ಈಗ ನಿಮ್ಮ ಜಾಗಕ್ಕೆ ನೀವು ಹೋಗಿ.

ಅಧ್ಯಕ್ಷರು.—ತಾವು, ತಮ್ಮ ಜಾಗಕ್ಕೆ ಹೋಗಿ ಮಾತನಾಡಿ. ಈ ಜಾಗದಲ್ಲಿ ತಾವು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

Sri M. S. KRISHNAN.—In the last year's report, they have said thus:

1) Peak load management by using Remotrol system is being tudied:

2) Equipment and accessories ordered for the project have been received and installed. The same is being commissioned shortly ಎಂದು ಇಲ್ಲಿ ಹೇಳಿದ್ದಾರೆ. ಇಲ್ಲಿ ನಾವು ಏನು ಪ್ರಶ್ನೆ ಕೇಳಿದ್ದೇವೆ. ಅದಕ್ಕೆ ಅವರು ಕೊಡತಕ್ಕ ಉತ್ತರ ಸರಿಯಾಗಿಲ್ಲ.

(ಪಿ. ಪಿ ಐ. ಸಿ. ಪಿ. ಎಂ. ಮತ್ತು ಜನತಾದ ಕೆಲವು ಸದಸ್ಯರು ಸಭಾಧ್ಯಕ್ಷರ ಎದುರಿನ ಆವರಣಕ್ಕೆ ಬಂದು ವಾದ ಮಾಡುತ್ತಿದ್ದರು.)

ಅಧ್ಯಕ್ಷರು.—ಇಲ್ಲಿ ನೀವು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ನಿಮ್ಮ ನಿಮ್ಮ ಜಾಗಕ್ಕೆ ಹೋಗಿ. ಜೆ. ಹೆಚ್. ಪಟೇಲರಿಗೆ ಮತ್ತೊಮ್ಮೆ ಕ್ಲಾರಿಫೈ ಮಾಡಿ ಎಂದು ಹೇಳುತ್ತೇನೆ. ಅವರು ಉತ್ತರ ಹೇಳುತ್ತಾರೆ. ರೈತರ ಪಷ್ಟ ನನಗೂ ಗೊತ್ತಿದೆ. ತಾವು ಹೇಳಿದ್ದು ನನಗೆ ಗೊತ್ತಿದೆ. ಈಗ ನಿಮ್ಮ ಜಾಗಕ್ಕೆ ಹೋಗಿ.

(ಎಂ. ಎಸ್. ಕೃಷ್ಣನ್ ಮತ್ತಿತರ ಸಿ. ಪಿ. ಐ, ಸದಸ್ಯರು ಸಭಾತ್ಯಾಗ ಮಾಡಿದರು.)